ಕ್ರಿಮಿನಲ್.ಮಿಸ್ಲೇನಿಯಸ್.ನಂ.114/2016

ಆರ್.ಡಬ್ಲ್ಯೂ -3.

**<u>ಸಾಕ್ಷಿಯನ್ನು ಇಂದು ದಿನಾಂಕಃ 06.05.2023 ರಂದು ಪುನಃ ಕರೆದು ಪ್ರಮಾಣೀಕರಿಸಲಾಯಿತು</u>**

<u>ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಎ.ಡಬ್ಲ್ಯೂ.ಎ. ವಕೀಲರಿಂದಃ</u>

ಎದುರುದಾರನು ಮೂಲತಃ ಹಿತ್ತಲಶಿರೂರ ಗ್ರಾಮದವನು ಎಂದರೆ ಸರಿ. ಎದುರುದಾರನಿಗೆ ಸಂಬಂಧಿಸಿದ ಮನೆ ಮತ್ತು ಜಮೀನುಗಳು ಹಿತ್ತಲಶಿರೂರ ಗ್ರಾಮದಲ್ಲಿ ಇದ್ದಾವಾ ಎಂದರೆ ಸಾಕ್ಷಿ ಇದ್ದಾವೆ ಎಂದು ಕೇಳಿದ್ದೆನೆ ಎಂದು ನುಡಿಯುತ್ತಾರೆ. ನಾನು ಹಿತ್ತಲಶಿರೂರ ಗ್ರಾಮಕ್ಕೆ ಎಂದೂ ಹೋಗಿರುವುದಿಲ್ಲ. ಅರ್ಜಿದಾರ ನಂ.೧ ಮತ್ತು ಎದುರುದಾರನ ಮದುವೆ ನಂತರ ಇಬ್ಬರೂ ಹಿತ್ತಲಶಿರೂರ ಗ್ರಾಮದಲ್ಲಿ ವಾಸವಿದ್ದರು ಎಂದರೆ ಸರಿ ಸಾಕ್ಷಿ ಮುಂದುವರೆದು 5-6 ವರ್ಷ ವಾಸವಿದ್ದರು ಎಂದು ನುಡಿಯುತ್ತಾರೆ. ಅರ್ಜಿದಾರ ನಂ.೨ರವರು ಎದುರುದಾರ ಮತ್ತು ಅರ್ಜಿದಾರ ನಂ.೧ ರವರು ಹಿತ್ತಲಶಿರೂರ ಗ್ರಾಮದಲ್ಲಿದ್ದಾಗ ಜನಿಸಿರುತ್ತಾರೆ ಎಂಧರೆ ಸರಿ. ಅರ್ಜಿದಾರ ನಂ.೧ ಮತ್ತು ಎದುರುದಾರನು ದುಡಿಯಲು ಪುಣೆಗೆ ಹೋಗಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂಧು ನುಡಿಯುತ್ತಾರೆ. ಅರ್ಜಿದಾರ ನಂ.೧ ಮತ್ತು ಎದುರುದಾರನು ಮದುವೆ ಆದ ಎಷ್ಟು ವರ್ಷಕ್ಕೆ ಧುತ್ತರಗಾಂವಕ್ಕೆ ಬಂದರು ಎಂಧರೆ ಸಾಕ್ಷಿಯು ನನಗೆ ಹೇಳಲು ಆಗುವುದಿಲ್ಲ, ಆದರೆ ಧುತ್ತರಗಾಂವಕ್ಕೆ ಬಂದು 16-17 ವರ್ಷ ಆಗಿದೆ ಎಂದು ನುಡಿಯುತ್ತಾರೆ. ಅವರಿಬ್ಬರು ಧುತ್ತರಗಾಂವಕ್ಕೆ ಬಂದು ಒಂದು ಬಾಡಿಗೆ ಮನೆ ಮಾಡಿಕೊಂಡು ಇದ್ದರು. ಅರ್ಜಿದಾರ ನಂ.೧ ಮತ್ತು ಎದುರುದಾರ ಧುತ್ತರಗಾಂವಕ್ಕೆ ಬಂದ ನಂತರ ಎಷ್ಟು ವರ್ಷ ಇದ್ದನು ಎಂದರೆ ಸಾಕ್ಷಿಯು 2-3 ವರ್ಷ ಕೂಡಿ ಇದ್ದರು ಎಂದು ನುಡಿಯುತ್ತಾರೆ.

ಎದುರುದಾರ ಅರ್ಜಿದಾರರು ಮತ್ತು ಅವರು ಒಟ್ಟಿಗೆ ಇದ್ದಾಗ ಅವನೇ ದುಡಿದು ಮನೆ ನಡೆಸಿರುತ್ತಾನೆ ಎಂಧರೆ ಸರಿ. ಎದುರುದಾರನು ಅರ್ಜಿದಾರ ನಂ.೧ ರವರನ್ನು ಬಿಟ್ಟು ಈಗ ಸುಮಾರು 10 ವರ್ಷ ಆಗಿರುತ್ತದೆ. ಎದುರುದಾರನು ಸುಮಾರು 10 ವರ್ಷಗಳಿಂದ ಅರ್ಜಿದಾರರಿಗೆ ಯಾವುದೇ ಜೀವನಾಂಶ ಕೊಟ್ಟಿರುವುದಿಲ್ಲ ಎಂಧರೆ ಸರಿ. ಎದುರುದಾರನ ಧುತ್ತರಗಾಂವ ಗ್ರಾಮದಲ್ಲಿ ಸುಮಾರು 15-16 ವರ್ಷಗಳಿಂದ ವಾಸವಿದ್ದಾನೆ. ಎದುರುದಾರನಿಗೆ ಧುತ್ತರಗಾಂವ ಗ್ರಾಮದಲ್ಲಿ ಸ್ವಂತ ಮನೆ ಇರುವುದಿಲ್ಲ. ಎದುರುದಾರನು ಒಬ್ಬನೇ ಜೀವನ ಸಾಗಿಸುತ್ತಿದ್ದಾನೆ. ಎದುರುದಾರನು ಟೇಲರಿಂಗ್ ಕೆಲಸ ಮಾಡುತ್ತಾನಾ ಎಂದರೆ ಸಾಕ್ಷಿಯು ಬಟ್ಟೆ ಹೊಲೆಯುವುದು ಮಾಡುವುದು ಮಾಡುತ್ತಾನೆ, ಬಟ್ಟೆ ಕೆಲಸವಿಲ್ಲದಾಗ ಕೂಲಿ ಕೆಲಸಕ್ಕೆ ಹೋಗುತ್ತಾನೆ ಎಂದು ನುಡಿಯುತ್ತಾರೆ. ದಿನಕ್ಕೆ ಎದುರುದಾರನಿಗೆ 200-300 ಕೂಲಿ ಕೊಡುತ್ತಾರೆ. ಬಟ್ಟೆ ಹೊಲೆಯುವ ಕೆಲಸದಿಂದ ಎದುರುದಾರನಿಗೆ ತಿಂಗಳಿಗೆ ರೂ.1000 ಆದಾಯ ಸಿಗಬಹುದು.

ಸುಮಾರು 5-6 ವರ್ಷಗಳ ಹಿಂದೆ ನನ್ನ ಸಮಕ್ಷಮ ಪಂಚಾಯತಿ ಜರುಗಿರುತ್ತದೆ. ಆ ಪಂಚಾಯತಿಯಲ್ಲಿ ಇಬ್ಬರೂ ಗಂಡ ಹೆಂಡತಿ ನಾವು ಮತ್ತು ಒಬ್ಬ ಕಲಬುರಗಿಯಿಂದ ಬಂದಿದ್ದನು, ಅವನು ಎದುರುದಾರನಿಗೆ ಹೊಡೆ ಬಡೆ ಮಾಡಲು ಆರಂಭಿಸಿದನು. ನಾವು ಯಾಕೆ ಹೊಡೆಯುತ್ತಿದ್ದಿಯಾ ಎಂದು ಹೇಳಿ ಬಿಡಿಸಿರುತ್ತೇವೆ. ಆ ಘಟನೆ ಕುರಿತು ಫಿರ್ಯಾದಿ ಸಲ್ಲಿಸಿರುವುದಿಲ್ಲ. ಎದುರುದಾರನನ್ನು ಯಾಕೆ ಹೊಡೆಯುತ್ತಿದ್ದೀಯಾ ಎಂದು ಕೇಳುವಷ್ಟರಲ್ಲಿ ಓಡಿ ಹೋದನು ಎಂದು ನುಡಿಯುತ್ತಾರೆ. ನಾನು ಸದರಿ ಅರ್ಜಿದಾರಳನ್ನು ಯಾಕೆ ಕರೆಯಿಸಿ ಹೊಡೆಸುತ್ತೆದೀಯಾ ಎಂದು ಕೇಳಿದಾಗ ಅರ್ಜಿದಾರಳು ನನಗೆ ಎದುರುದಾರನು ಅಲ್ಲಿ ಹೋಗುತ್ತೀಯಾ ಇಲ್ಲಿ ಹೋಗುತ್ತಿಯಾ ಎಂದು ಸಂಶಯ ಮಾಡುತ್ತಿದ್ದನು ಎಂದು

ಹೇಳಿದಳು, ನೀನು ಹಾಗೆ ಇದ್ದರೆ ಮಾತಾಡುತ್ತಾರೆ ಎಂದು ಹೇಳಿದೆನು ಎಂದು ನುಡಿಯುತ್ತಾರೆ. ಪಂಚಾಯತಿಯಲ್ಲಿ ನೀನು ನಿನ್ನ ಪಾಡಿಗೆ ಇರು, ಇವನು ಇವನ ಪಾಡಿಗೆ ಇರುತ್ತಾನೆ ಎಂದು ಹೇಳಿ ಅಷ್ಟಕ್ಕೆ ಬಗೆಹರಿಸಿದೆವು. ಆದರೆ ಯಾವುದೇ ಕಾಗದ ಪತ್ರಗಳನ್ನು ಬರವಣಿಗೆ ಮೂಲಕ ಮಾಡಿರುವುದಿಲ್ಲ.

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಅಡಿಗೆ ಸಂಬಂಧ ಅರ್ಜಿದಾರಳು ಮತ್ತು ಎದುರುದಾರನ ನಡುವೆ ಜಗಳ ಬಂದಿತ್ತು ಎಂದು ಹೇಳಿರುತ್ತೇನೆ ಎಂದರೆ ಸರಿ. ಎದುರುದಾರನು ಸ್ವಂತ ಅಡುಗೆಯನ್ನು ಮಾಡಿ ಊಟ ಮಾಡಿಕೊಳ್ಳುತ್ತಿದ್ದಾನೆ ಎಂದು ನುಡಿಯುತ್ತಾರೆ. ಅರ್ಜಿದಾರಳಿಗೆ ಮೂರು ಜನ ಅಣ್ಣ ತಮ್ಮಂದಿರು ಇರುತ್ತಾರೆ, ಅವರ ಹೆಸರು ನನಗೆ ಗೊತ್ತಿಲ್ಲ. ಅರ್ಜಿದಾರಳ ತಂದೆ ತಾಯಿಯ ಕುಟುಂಬ ಒಳ್ಳೆಯ ಕುಟುಂಬ ಎಂಧರೆ ಸಾಕ್ಷಿಯು ಅವರ ತಂದೆ ಇದ್ದಾಗ ಒಳ್ಳೆ ಕುಟುಂಬ ಇತ್ತು ಎಂದು ನುಡಿಯುತ್ತಾರೆ. ಅರ್ಜಿದಾರಳ ತಂದೆ ತೀರಿಕೊಂಡು ಈಗ 10 ರಿಂದ 15 ವರ್ಷ ಆಗಿರಬಹುದು ಎಂದು ನುಡಿಯುತ್ತಾರೆ. ಅರ್ಜಿದಾರಳು ಒಳ್ಳೆ ಸಂಸ್ಕೃತಿಯನ್ನು ಹೊಂದಿರುತ್ತಾಳೆ ಎಂದರೆ ಸರಿ ಅಲ್ಲ. ಎದುರುದಾರನು ಅರ್ಜಿದಾರಳ ವಿರುದ್ದ ಯಾವುದೇ ಪ್ರಕರಣ ದಾಖಲಿಸಿರುವುದಿಲ್ಲ, ಸಾಕ್ಷಿ ಮುಂದುವರೆದು ಅರ್ಜಿದಾರಳೇ ಎದುರುದಾರನ ಮೇಲೆ ಪ್ರಕರಣ ದಾಖಲಿಸಿರುತ್ತಾಳೆ ಎಂದು ನುಡಿಯುತ್ತಾರೆ.

ಪಂಚಾಯತಿಯ ಸಮಯದಲ್ಲಿ ಎದುರುದಾರನಿಗೆ ಇನ್ನೊಂದು ಮದುವೆ ಮಾಡಿಕೋ ಎಂದು ಹೇಳಿರುವುದಿಲ್ಲ, ನಂತರ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ಅರ್ಜಿದಾರಳಿಗೆ ತಿಂಗಳಿಗೆ ರೂ.5000/- ಜೀವನಾಂಶ ಬೇಕಾಗುತ್ತದೆ ಎಂದರೆ ಸರಿ ಅಲ್ಲ, ಸಾಕ್ಷಿ ಮುಂದುವರೆದು ಅವಳು ಬೇರೆಯವರ ಜೊತೆ ಸಂಬಂಧ ಹೊಂದಿದ್ದಾಳೆ ಅವನು ಕೊಡಬೇಕು ಎಂದು ನುಡಿಯುತ್ತಾರೆ. ಅರ್ಜಿದಾರಳು ಬೇರೆಯವರ ಜೊತೆ ಸಂಬಂಧ ಹೊಂದಿರುತ್ತಾಳೆ ಎಂದು ಹೇಳುತ್ತೀರಲ್ಲಾ ಅವರ ಹೆಸರು ಹೇಳಲು ಬರುತ್ತದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಎದುರುದಾರನ ಮಾತು ಕೇಳಿಕೊಂಡು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂಧರೆ ಸರಿ ಅಲ್ಲ. ಎದುರುದಾರನು ನನ್ನ ಬಟ್ಟೆಯನ್ನು ಹೊಲೆಯುತ್ತಾನೆ ಎಂಧರೆ ಸರಿ ಅಲ್ಲ. ಆದಕಾರಣದಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಅರ್ಜಿದಾರ ನಂ.೨ ರವರಿಗೆ ತಿಂಗಳಿಗೆ ರೂ.3000/- ಜೀವನಾಂಶ ಬೇಕಾಗುತ್ತದೆ ಎಂದರೆ ಸಾಕ್ಷಿಯು ಎದುರುದಾರನ ಬಳಿ ತಂದು ಬಿಡಬೇಕು ಅವನು ನೋಡಿಕೊಳ್ಳುತ್ತಾನೆ ಎಂದು ನುಡಿಯುತ್ತಾರೆ. ಎದುರುದಾರನು ಅರ್ಜಿದಾರರಿಗೆ ಜೀವನಾಂಶ ಕೊಡುವ ಶಕ್ತಿಯನ್ನು ಹೊಂದಿರುತ್ತಾನೆ ಎಂಧರೆ ಸರಿ ಅಲ್ಲ. ಎದುರುದಾರನ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂಧರೆ ಸರಿ ಅಲ್ಲ.

ಮರುವಿಚಾರಣೆ : ಇರುವುದಿಲ್ಲ.

ಓ.ಹೇ.ಕೆ.ಸರಿ.ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ.ಸಿ.ಆಳಂದ.